**ಸಾಕ್ಷಿಯನ್ನು ದಿಃ *23/04/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಎ.ಎಸ್.ಪಿ ವಕೀಲರಿಂದ 2 ನೇ ಎದುರುದಾರರ** ಪರವಾಗಿ.

ಈಗಲ್ ಡಿಟೆಕ್ಟಿವ ಫೋರ್ಸ ಮಾಲೀಕರು ಎಂದರೆ ನಾಗಪ್ಪ ಗುರುಬಸಪ್ಪ ಬಿದರಿ. ಸದರಿಯವರು ನನಗೆ ಸಾಕ್ಷ ನುಡಿಯಲು ಅಧಿಕಾರ ಕೊಟ್ಟಿದ್ದಾರೆ ಎಂದು ನಾನು ಸಲ್ಲಿಸಿರುವ ಅಧಿಕಾರ ಪತ್ರದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿ.ಪಿ.18 ರ ಅಧಿಕಾರ ಪತ್ರದಲ್ಲಿ ನಮ್ಮ ಫೋರ್ಸನ ಸೀಲು ಹಾಕಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಲೇಟರ ಪ್ಯಾಡ ಮೇಲೆ ಮಾಡಿರುವ ಕಾರಣ ಸೀಲು ಹಾಕಿಲ್ಲ ಎಂದು ಉತ್ತರಿಸುತ್ತಾರೆ. ಅಧಿಕಾರ ಕೊಟ್ಟಿರುವ ವ್ಯಕ್ತಿಯ ಸಹಿಯ ಹೆಸರಾಗಲಿ ಮತ್ತು ಸೀಲು ಹಾಕಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅಧಿಕಾರ ಕೊಟ್ಟಿರುವ ವ್ಯಕ್ತಿಯು ಸಹಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಇರುವಾಗ ನಾನು ಕೊಟ್ಟಿರುವ ಅಧಿಕಾರ ಪತ್ರ ಕಾನೂನು ಊರ್ಜಿತವಲ್ಲ, ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ನಾನು ಸದರಿ ಫೋರ್ಸನಲ್ಲಿ ಕೆಲಸ ಮಾಡುವ ಕುರಿತು ಯಾವುದೇ ರೀತಿ ಗುರುತಿನ ಚೀಟಿ ಹಾಜರುಪಡಿಸಿಲ್ಲ ಎಂದರೆ ನಿಜ, ಸಾಕ್ಷಿದಾರರು ಮುಂದುವರೆದು ಗುರುತಿನ ಚೀಟಿ ಇರುತ್ತದೆ ಎಂದು ಉತ್ತರಿಸುತ್ತಾರೆ. ನಾನು ಸದರಿ ಫೋರ್ಸನಲ್ಲಿ ಕೆಲಸ ಮಾಡದೇ ಇರಲಾರದ ಕಾರಣ ನಾನು ಗುರುತಿನ ಚೀಟಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಪ್ರಮಾಣಪತ್ರದ 3 ನೇ ಖಂಡಿಕೆಯಲ್ಲಿ ಮೃತನನ್ನು ಹೊರ ಗುತ್ತಿಗೆ ಆಧಾರದ ಮೇರೆಗೆ ಕೆಲಸಕ್ಕೆ ತೆಗೆದುಕೊಂಡಿರುವ ಕುರಿತು ಬರೆದಿರುವ ವಿಷಯ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಈ ರೀತಿ ಹೊರಗುತ್ತಿಗೆ ಆಧಾರದ ಮೇರೆಗೆ ಕೆಲಸಕ್ಕೆ ಸೇರಿದರು ಸಹ ಸದರಿ ಕೆಲಸಗಾರರ ವಿವರಗಳು ಮತ್ತು ವೈಯಕ್ತಿಕ ಮಾಹಿತಿ ಸಂಗ್ರಹಿಸಿ ಪ್ರತ್ಯೇಕ ರಜಿಸ್ಟರನಲ್ಲಿ ಇಟ್ಟಿರುತ್ತೇವೆ ಎಂದರೆ ನಿಜ. ಈ ರೀತಿ ಇರುವ ರಜಿಸ್ಟರ ಮತ್ತು ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಈ ರೀತಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿರುವ ವ್ಯಕ್ತಿಗಳಿಗೆ ನಾವು ಆರಟಿಜಿಎಸ್ ಮುಖಾಂತರ ಸಂಬಳ ನೀಡುತ್ತೇವೆ. ಈ ರೀತಿ ಆರಟಿಜಿಎಸ ಮುಖಾಂತರ ಮೃತನಿಗೆ ಸಂಬಳ ನೀಡಿರುವ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆ ನಿ.ಪಿ.17 ರಂತೆ ಇರುತ್ತದೆ. ನಿ.ಪಿ.17 ರ ಪ್ರಕಾರ ಸರಕಾರದಿಂದ ಪಿಂಚಣಿ ಹಣ ಬಂದಿರುವ ಕುರಿತು ನಮೂದು ಇರುತ್ತದೆ, ನಾವು ಸಂಬಳ ಆರಟಿಜಿಎಸ ಮುಖಾಂತರ ಕೊಟ್ಟಿರುವುದು ನಮೂದು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ದಾಖಲೆ ನೋಡಿ ಇರುವುದಿಲ್ಲ

ಎಂದು ಉತ್ತರಿಸುತ್ತಾರೆ. ಆದ್ದರಿಂದ ಮೃತನು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ನಾವು ಅವನಿಗೆ ಯಾವುದೇ ರೀತಿಯ ಸಂಬಂಧವಿಲ್ಲ ಮತ್ತು ಅವರಿಗೆ ಯಾವುದೇ ರೀತಿ ಸಂಬಳ ಕೊಡುತ್ತಿರಲಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

ನನ್ನ ಅಧಿಕಾರ ಪತ್ರದ 1 ನೇ ಖಂಡಿಕೆಯಲ್ಲಿ ಹೊರಗುತ್ತಿಗೆ ಆಧಾರದ ಕೆಲಸಗಾರರಿಗೆ ಸಂಬಳ ನೀಡುವ ವಿಧಾನ ಬರೆದಿದ್ದು ನಿಜವಿರುತ್ತದೆ. ಈ ರೀತಿ ಸಂಬಳ ನೀಡುವ ವಿಧಾನದ ಪೂರಕ ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ಆದ್ದರಿಂದ ಸದರಿ ಮೃತನು 25 ಸಾವಿರ ರೂಪಾಯಿ ಸಂಬಳ ಪಡೆಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೃತನ ನೇಮಕಾತಿ ಆದೇಶ ನಾವು ಪಡೆದುಕೊಂಡಿಲ್ಲ. ಆದ್ದರಿಂದ ನನ್ನ ಪ್ರಮಾಣಪತ್ರದ 3 ಮತ್ತು 4 ನೇ ಖಂಡಿಕೆಯಲ್ಲಿ ಬರೆದಿರುವ ವಿಷಯ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಅರ್ಜಿದಾರರು ನನಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ವಿನಂತಿಸಿಲ್ಲ. ನಾನು ಯಾವುದೇ ಅಧಿಕಾರವಿಲ್ಲದೇ ವಕೀಲರ ಮಾತು ಕೇಳಿ ಸಂಬಂಧವಿಲ್ಲದ ದಾಖಲಾತಿ ಹಾಜರುಪಡಿಸಿ ಅದರಂತೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಎಲ್ಲ ಸಲಹೆಗಳು ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.